ಕಥೆ

# ನಯನಾಳ ಕಥೆ



**ಸಿಡ್ನಿ ಶ್ರೀನಿವಾಸ್**

ಕಲೆ: ಸಂತೋಷ್ ಸಸಿಹಿತ್ಲು

ನಯನಾಳ ಮನಸ್ಸು ತಾಕಲಾಟಕ್ಕೆ ಸಿಕ್ಕಿಕೊಂಡಿತ್ತು. ತನಗೆ ತುಸು ಮೇಲಧಿಕಾರಿ ಎನಿಸಿದ್ದ ಸ್ಟೆಲ್ಲಾ ಇವಳಿಗೆ ಅಂತಿಮ ಎಚ್ಚರಿಕೆಯನ್ನು ನೀಡಿದ್ದಳು.

“ನೀನು ಈ ಅಹವಾಲಿಗೆ ಸಹಿ ಹಾಕದಿದ್ದರೆ ಮುಂದಾಗುವುದಕ್ಕೆ ನಾವು ಜವಾಬ್ದಾರರಲ್ಲ. ನಿನ್ನನ್ನು ನಮ್ಮೊಡನೆ ಸೇರಿಸಿಕೊಂಡಿದ್ದು ನಿನಗೆ ಆಶ್ಚರ್ಯ ತಂದಿರಬಹುದು. ಆದರೆ, ನೀನು ಅವನ ಗುಹೆಯನ್ನು ಹೊಕ್ಕಿರುವುದು ಖಂಡಿತ. ಇದಕ್ಕೆ ಕಾರಣಗಳೇನು, ಹೀಗಾಗುವುದಕ್ಕೆ ಸಂದರ್ಭ ಮತ್ತು ಪರಿಸ್ಥಿತಿಗಳೇನು ಎಂಬುದು ಈಗ ಅಪ್ರಸ್ತುತ. ನೀನು ಅವನಿಂದ ಸಾಕಷ್ಟು ಸವಲತ್ತುಗಳನ್ನು ಪಡೆದುದಷ್ಟನ್ನೇ ಮಿಕ್ಕವರು ಗಮನಿಸಿದ್ದಾರೆ. ಆದರೆ, ನೀನು ಸಹಿಸಿರಬಹುದಾದ ಬಲಾತ್ಕಾರ, ಕಿರುಕುಳ, ಹಿಂಸೆ ಅವರ ಗಮನಕ್ಕೆ ಬಂದಿಲ್ಲ. ಧೈರ್ಯವಾಗಿ ಹೊರಬಂದು ನಿಜ ಹೇಳುವ ಅವಕಾಶ ನಿನಗೀಗ ಇದೆ. ಸಹಿ ಮಾಡದೆ ಹೋದರೆ ಹಾನಿಯಾಗುವುದು ನಿನಗೆ. ಈ ಪ್ರೊಫೆಸರ್ ವಿಲಿಯಮ್ ಟರ್ನರ್ ಡಿಸ್ಮಿಸ್ ಆಗುವುದು ಖಂಡಿತ. ಹಾಗಾದಾಗ ನಿನ್ನ ರಕ್ಷಣೆಗೆ ನಾವ್ಯಾರೂ ಬರುವುದಿಲ್ಲ. ನೀನು ಸಹಿ ಮಾಡಿದ್ದೇ ಆದರೆ ಮುಂದೆ ಏನೇ ಆದರೂ ನಮ್ಮ ಯೂನಿಯನ್ ನಿನ್ನನ್ನು ಕಾಪಾಡುತ್ತದೆ. ಈ ವಿಷಯ ನಿನಗೆ ಚೆನ್ನಾಗಿ ಗೊತ್ತು. ಹತ್ತಾರು ಸಲ ನಿನಗೆ ಹೇಳಿದ್ದೇನೆ. ಇನ್ನು ನಿನ್ನ ಇಷ್ಟ, ನಮ್ಮ ದೂರು ನಾಳೆ ವೈಸ್ ಛಾನ್ಸೆಲರ್ ಅವರಿಗೆ ಹೋಗಲೇಬೇಕು. ಇನ್ನು ತಡೆಯುವುದು ಆಗದ ಕೆಲಸ.”

ತನ್ನ ಕೆಲಸವನ್ನು ಅಲ್ಲಿಯೇ ನಿಲ್ಲಿಸಿ ನಯನಾ ಕಾಫಿಯ ರೂಮಿಗೆ ಧಾವಿಸಿಬಂದು ಕುಳಿತಳು. “ಈಗೇನು ಮಾಡುವುದು?” ಸ್ಟೆಲ್ಲಾ ನುಡಿದ “ಹಿಂಸೆ, ಕಿರುಕುಳ, ಬಲಾತ್ಕಾರ” ಪದಗಳನ್ನು ಕೇಳಿ ಅವಳಿಗೆ ದಿಗಿಲಾಯಿತು. “ನನ್ನ ಅಧಿಕ ಪ್ರಸಂಗದಿಂದ ಆಗಿದ್ದು ಇದು. ಅದಕ್ಕೆ ಏನೇನೋ ಬಣ್ಣ ಹಚ್ಚುತ್ತಿದ್ದಾರೆ!”

ಸಹಿ ಮಾಡಿದರೆ ಆತ್ಮವಂಚನೆ. ಅವನ ಜೊತೆ ಎಷ್ಟು ಸಲಿಗೆ ನನಗೆ! ನಾನು ಈ ವಿಭಾಗದಲ್ಲಿ ಮೇಲೆ ಬಂದಿರುವುದಕ್ಕೆ ಅವನೇ ಕಾರಣ. ಸಂಶೋಧನೆಯಲ್ಲಿ ನನಗೆ ನೆರವಾಗಿದ್ದಾನೆ. ಅದರಲ್ಲಿ ಯಾವುದೇ ಅಡಚಣೆ ಇಲ್ಲದಂತೆ ನೋಡಿಕೊಂಡಿದ್ದಾನೆ. ಅವನು ಮಿಕ್ಕವರೊಡನೆ ಬರೆದ ಪೇಪರ್ ಗಳಲ್ಲಿಯೂ ತನ್ನ ಹೆಸರನ್ನು ಸೇರಿಸಿದ್ದಾನೆ. ಒಂದು ರೀತಿಯಲ್ಲಿ ಅವನು ನನ್ನ ಸಂಶೋಧನೆಯ ಸಾಕು ತಂದೆ. ಇಲ್ಲ ಇಲ್ಲ. ತಂದೆ ಎನ್ನುವುದು ಸರಿಯಲ್ಲ. ಅವನೊಡನೆ ಆಪ್ತಳಾಗಿ ಕಳೆದ ಸಮಯವೆಷ್ಟೋ!

ರಾತ್ರಿ ಎಂಟರವರೆಗೆ ಪ್ರಯೋಗಾಲಯದಲ್ಲಿಯೇ ಇರುತ್ತಿದ್ದ. ಮನೆಗೆ ಹೋಗುವಾಗ ಇವಳು ಅಲ್ಲಿಯೇ ಇದ್ದರೇ ತನ್ನ ಕಾರಿನಲ್ಲಿ ಅವಳನ್ನು ಕರೆದುಕೊಂಡು ಹೋಗುತ್ತಿದ್ದ. ಅವಳ ರೂಮ್ ಆದರೂ ಸರಿ, ಅವನ ಮನೆಯಾದರೂ ಸರಿ,